ಶ್ರಿ ಬಿ.ಎಲ್. ಶಂಕರ್ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮೈಸೂರು ಕಾಗದ ಕಾರ್ಖಾನೆಗೆ ಸಂಬಂಧಪಟ್ಟ ಹಾಗೆ ಕೆಲವು ದಿನಗೂಲಿ ನೌಕರರು ಕಳೆದ ತಿಂಗಳಿನಿಂದ ಮುಷ್ಕರ ಮಾಡುತ್ತಿರತಕ್ಕ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಸಂಬಂಧಪಟ್ಟ ಕಾರ್ಖಾನೆಯ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ಮತ್ತು ಇಲಾಖೆಯ ಕಾರ್ಯದರ್ಶಿಯವರು ಸಭೆಯನ್ನು ಶೀಘ್ರವಾಗಿ ಕರೆದು ಹಾಗೂ ಅಲ್ಲಿಯ ನೌಕರರ ಮುಖಂಡರನ್ನು ಕೂಡ ಇದರ ಬಗ್ಗೆ ಕರೆದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

(ಓ) ದಿನಾಂಕ 30-30-98ರಂದು ಗದಗ್ ನಗರದಲ್ಲಿ ಕಳ್ಳರನ್ನು ಹಿಡಿಯಲು ಹೋಗಿ ಕೊಲೆಯಾದವನಿಗೆ ಪರಿಹಾರ

ಶ್ರೀ ಡಿ.ಆರ್.ಪಾಟೀಲ್ (ಗದಗ ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೆ, 30-3-1988 ರಂದು ಗದಗ್‌ನಗರದಲ್ಲಿ ಹಗಲು ಹೊತ್ತಿನಲ್ಲಿ ಕಳ್ಳತನ ಮಾಡಿದಂಥ ಕಳ್ಳರನ್ನು ಹಿಡಿಯಲು ಹೋಗಿ ಕಳ್ಳರ ಚೂರಿ ಇರಿತಕ್ಕೆ ಒಬ್ಬ ಬಲಿಯಾಗಿ ಅಸುನೀಗಿದ. ಅವನ ಕುಟುಂಬಕ್ಕೆ ಪರಿಹಾರ ಕೊಡಬೇಕೆಂದು ನಾನು ಒತ್ತಾಯ ಮಾಡಿದಾಗ 28-4-1998ರಂದು ಸದನದಲ್ಲಿ ಆಗಿನ ಗೃಹ ಸಚಿವರಾದ ಶ್ರೀ ರೋಷನ್ ಬೇಗ್ ಅವರು - ಮಾನ್ಯ ಸದಸ್ಯರು ಹೇಳಿದಂತೆ ಕಳ್ಳರನ್ನು ಹಿಡಿಯಲು ತನ್ನ ಜೀವನ ತೆತ್ತ ಒಂದು ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಎಂದು ನನಗೆ ಭರವಸೆ ಕೊಟ್ಟರು. 30-3-1999ರಂದು ಅವನ ವಾರ್ಷಿಕ ತಿಥಿ ಇದೆ. ಅಷ್ಟರೊಳಗೆ ಆ ಒಂದು ಲಕ್ಷ ರೂಪಾಯಿಗಳು ಅವನ ಮನೆಗೆ ತಲುಪಿಸುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಹಿಂದಿನ ಗೃಹಸಚಿವರು ಒಂದು ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಕೊಡುವ ತೀರ್ಮಾನವನ್ನು ಮಾಡಿದ್ದೇವೆ ಎನ್ನುವ ಭರವಸೆಯನ್ನು ನೀಡಿದ್ದಾರೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಆ ರೀತಿಯಾದಂಥ ಭರವಸೆ ಇಲ್ಲಿ ನೀಡಿರತಕ್ಕಂಥದ್ದು ನಿಜ ಆದರೆ ಆ ಭರವಸೆ ಪ್ರಕಾರ ಸರ್ಕಾರ ನಡೆದುಕೊಳ್ಳುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಅಃ) ನಿರುದ್ಯೋಗಿ ಶಿಕ್ಷಕರ ಕುರಿತು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪಾಧ್ಯಕ್ಷರೆ, ಸುಮಾರು 10-15 ವರ್ಷಗಳಿಂದ ಎಸ್.ಎಸ್.ಎಲ್.ಸಿ ಮತ್ತು ಟಿಸಿಹೆಚ್‌ನಲ್ಲಿ ತೇರ್ಗಡೆ ಹೊಂದಿರತ್ಕಂಥ ಸುಮಾರು 18 ಸಾವಿರ ಶಿಕ್ಷಕರು ನಿರುದ್ಯೋಗಿಗಳಾಗಿದ್ದಾರೆ. ಸನ್ಮಾನ್ಯ ಗೋವಿಂದೇಗೌಡರ ಜೊತೆಯಲ್ಲಿ ಇವರ ಬಗ್ಗೆ ಚರ್ಚೆ ಮಾಡಿದಾಗ- ತರಬೇತಿ ಜೇಷ್ಠತೆ ಮತ್ತು ವಯಸ್ಸಿನ ಜೇಷ್ಠತೆ ಮೇಲೆ 29 ವರ್ಷದ ಮೇಲಿನವರಿಗೆ ಕನಿಷ್ಠ 6 ರಿಂದ 7 ಸಾವಿರ ಜನ ಉಪಾಧ್ಯಯರಿಗೆ ಅವಕಾಶ ಮಾಡಿಕೊಡುವಂಥ ವಿಚಾರವನ್ನು ಹೇಳಿದ್ದಾರೆ. ಈಗಾಗಲೇ ಆ ಶಿಕ್ಷಕರ ವಯಸ್ಸು ಮೀರುತ್ತಿದೆ. ಆದ್ದರಿಂದ ದಯವಿಟ್ಟು ಮಾನ್ಯ ಮಂತ್ರಿಗಳು ಹಿಂದೆ ಏನು ಹೇಳಿದ್ದಾರೆ ಅದನ್ನು ಅನುಷ್ಠಾನಕ್ಕೆ ತರಬೇಕೆಂದು ತಮ್ಮ ಮೂಲಕ ಮಾನ್ಯ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಪ್ರಾಥಮಿಕ ಶಿಕ್ಷಕರ ನೇಮಕಾತಿಯಲ್ಲಿ ಈ ಸರ್ಕಾರ ಬಂದ ನಂತರ 1995ರಲ್ಲಿ ಒಂದು ಬಾರಿ 29ವರ್ಷ ಮೇಲ್ಪಟ್ಟವರಿಗೆ ಮೀಸಲಾತಿ ನೀಡಲಾಗಿತ್ತು. ಇವರನ್ನು ನೇಮಕಾತಿ ಮಾಡಿಕೊಳ್ಳಲು ವಿಶೇಷವಾದ ನೇಮಕಾತಿ ನಿಯಾಮಗಳನ್ನು ರೂಪಿಸಬೇಕಾಗುತ್ತದೆ. ಪದೇಪದೇ ಸಾಮಾನ್ಯ ನೇಮಕಾತಿ ನಿಯಮಗಳನ್ನು ಬದಿಗಿಟ್ಟು, ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸುವುದನ್ನು ನ್ಯಾಯಾಲಯವು ಕೂಡ ಒಪ್ಪುವುದಿಲ್ಲ. ಆದರೂ ಸಹ, ಶಿಕ್ಷಕರ ಮೇಲೆ ಕರುಣೆಯಿಂದ ಅವರುಗಳಿಗೆ ಮತ್ತೊಂದು ಅವಕಾಶ ನೀಡಲು ಸರ್ಕಾರ ಯೋಚಿಸಿದೆ. ಈಗ ಹೊರಡಿಸಿರುವ ಸಾಮಾನ್ಯ ನೇಮಕಾತಿ ಪ್ರಕ್ರಿಯೆ ಮುಗಿದ ನಂತರ, ವಿಶೇಷ ನೇಮಕಾತಿ ಮೂಲಕ 29 ವರ್ಷಗಳಿಗೆ ಮೇಲ್ಪಟ್ಟ ಟಿಸಿಹೆಚ್ ಪೂರೈಸಿದ ಅಭ್ಯರ್ಥಿಗಳನ್ನು ನೇಮಕ ಮಾಡಲು ಸರ್ಕಾರ ಯೋಚಿಸುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎಪಿಎಂಸಿ ಸಭೆ ಕರೆದಿದ್ದರಿಂದಾಗಿ ನಾನು ಅಲ್ಲಿಗೆ ಹೋಗಿದ್ದು, ಇಲ್ಲಿ ಇರಲಿಲ್ಲ. ಅದಕ್ಕೆ ಈಗ ವಿಷಯ ಪ್ರಸ್ತಾಪಿಸಲು ಅವಕಾಶ ಕೊಡಬೇಕೆಂದು ಕೋರುತ್ತೇನೆ.

(ಕ) ಬೇಸಿಗೆ ತಿಂಗಳಲ್ಲಿ ನೀರೆತ್ತುವ ಪರವಾನಗಿ ಹೊರಡಿಸುವ ಕುರಿತು.

ಶ್ರಿ ಡಿ.ವಿ. ಸದಾನಂದಗೌಡ: ನಾನು ಶೂನ್ಯ ವೇಳೆಯಲ್ಲಿ ಬೇಸಿಗೆ ತಿಂಗಳಲ್ಲಿ ರೈತರಿಗೆ ತೊಂದರೆಯಾಗುವ ಬಗ್ಗೆ ಕೇಳಿದ್ದೆ. ಈಗ ಭಾರೀ ನೀರಾವರಿ ಸಚಿವರು ಬಂದಿರುವುದರಿಂದ, ಅವರಿಂದ ಉತ್ತರ ಕೊಡಿಸಬೇಕೆಂದು ನಾನು ಕೋರುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು): ದಿ: 17. 1. 97ರಂದು ಒಂದು ಸುತ್ತೋಲೆಯನ್ನು ಕಳುಹಿಸಿದ್ದೇವೆ. ಇದರಲ್ಲಿ ನೀರೆತ್ತಲು ಪರವಾನಗಿ ನೀಡುವಾಗ ಬೇಸಿಗೆ ತಿಂಗಳುಗಳಾದ ಫೆಬ್ರವರಿ, ಜೂನ್ ತಿಂಗಳನ್ನು ಹೊರತುಪಡಿಸಿ, ಬೇರೆ ತಿಂಗಳಲ್ಲಿ ನೀರೆತ್ತಲು ಅವಕಾಶ ಕೊಡಬಹುದೆಂದು ನೀರಾವರಿ ಇಲಾಖೆಯು ಅನುಮತಿ ಕೊಟ್ಟಿದೆ. ತಾವು, ಬೇಸಿಗೆ ತಿಂಗಳಲ್ಲಿ ಪ್ರಾಮುಖ್ಯತೆ ಕೊಡಿ ಎಂದು ಹೇಳುತ್ತಿದ್ದೀರಿ. ಆದರೆ, ನೀರು ನೈಸರ್ಗಿಕ ಸಂಪತ್ತು. ಬೇಸಿಗೆಯಲ್ಲಿ ಮಳೆ ಕಡಿಮೆ ಬೀಳುವುದರಿಂದ, ಜಾನುವಾರುಗಳಿಗೆ, ಕುಡಿಯುವ ನೀರಿಗೆ ತೊಂದರೆಯಾಗಬಾರದೆನ್ನುವ ದೃಷ್ಟಿಯಿಂದ, ಈ ಸುತ್ತೋಲೆಯನ್ನು ಹೊರಡಿಸಿದ್ದೇವೆ. ಅದನ್ನು ಬಿಟ್ಟು, ಇನ್ನೂ ಹೆಚ್ಚು ನೀರು ಲಭ್ಯವಾದರೆ, ಆ ಸ್ಥಳಗಳಲ್ಲಿ ಕೊಡಬಹುದೆಂದು ಸುತ್ತೋಲೆಯನ್ನು ತಿದ್ದುಪಡಿ ಮಾಡಿ ಕಳುಹಿಸಿಕೊಡುತ್ತೇನೆ.

(ಖ)ಮುಜರಾಯಿ ಇಲಾಖೆಯಲ್ಲಿ ಕ್ಲಾಸ್(2) ಅಧಿಕಾರಿ ಶ್ರೀವಿ.ಆರ್.ರಂಗಸ್ವಾಮಯ್ಯನವರು,ಬೆಂಗಳೂರು ಬನಶಂಕರಿ ದೇವಾಲಯದ ಜಮೀನನ್ನು ಅನಧಿಕೃತವಾಗಿ ಮಾರಾಟ ಮಾಡಲು ಸಹಕರಿಸಿದರೆಂಬ ವಿಚಾರದಲ್ಲಿ ಅಮಾನತ್ತು ಮಾಡಿರುವುದು.

+ಶ್ರೀ ಯು.ಆರ್. ಸಭಾಪತಿ(ಉಡುಪಿ): ಮುಜರಾಯಿ ಇಲಾಖೆಗೆ ಸಂಬಂಧಪಟ್ಟಂತೆ, ಮಂತ್ರಿಗಳು, ಅಧಿಕಾರಿಗಳು ಶಾಮೀಲಾಗಿರುವ ಭ್ರಷ್ಟಾಚಾರ ಪ್ರಕರಣವನ್ನು ನಾನು ಸದನದ ಮುಂದಿಡಲು ಬಯಸುತ್ತಿದ್ದೇನೆ. ಶ್ರೀ ವಿ.ಆರ್. ರಂಗಸ್ವಾಮಯ್ಯ, ಮುಜುರಾಯಿ ಇಲಾಖೆಯಲ್ಲಿ ಕ್ಲಾಸ್-2 ಅಧಿಕಾರಿ. ಅವರನ್ನು ಬೆಂಗಳೂರಿನ ಬನಶಂಕರಿ ದೇವಾಲಯದ ಜಮೀನನ್ನು ಅನಧಿಕೃತವಾಗಿ ಮಾರಾಟ ಮಾಡಲು ಸಹಕರಿಸಿದರೆಂಬ ಬಗ್ಗೆ ದಿ:20. 5. 95ರಂದು ಅಮಾನತ್ತುಗೊಳಿಸಿದ್ದಾರೆ. ದಿ:27. 8. 95ರಂದು ಈ